FOR SGF

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ,2011ನ್ನು ಯಶಸ್ವಿಯಾಗಿ ನಿರ್ವಹಿಸುವ ಹೆಸರಿಸಲಾದ ಅಧಿಕಾರಿಗಳಿಗೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಅನುಕ್ರಮವಾಗಿ ₹50,000 ಮತ್ತು ₹10,000ಗಳ ನಗದು ಬಹುಮಾನ ಹಾಗೂ ಸ್ಮರಣಿಕೆಯನ್ನು ನೀಡುವ ಬಗ್ಗೆ.

**ಓದಲಾಗಿದೆ** :-

1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ20ಇಕಾಅ2012, ದಿನಾಂಕ:06-03-2012
2) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ107ನಾಸೇಖಾ2017,ದಿನಾಂಕ:29-06-2017
3) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ318ನಾಸೇಖಾ2019,ದಿನಾಂಕ:23-04-2019

**ಪ್ರಸ್ತಾವನೆ:-**

ಮೇಲೆ ಓದಲಾದ (1)ರಲ್ಲಿನ ಆದೇಶದಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ,2011ನ್ನು ಅನುಷ್ಠಾನಗೊಳಿಸಲು ಸಕಾಲ ಮಿಷನ್‌ನ್ನು ಮಿಷನ್ ಮೋಡ್‌ನಲ್ಲಿ ರಚಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿನ ಸರ್ಕಾರದ ಆದೇಶದಲ್ಲಿ ತಂತ್ರಾಂಶ ಮತ್ತು ತಂತ್ರಜ್ಞಾನವನ್ನು ಆಧುನೀಕರಣಗೊಳಿಸಿ ಸಕಾಲ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಸದರಿ ಯೋಜನೆಯನ್ನು (ಸೃಜಿಸಲಾದ ಅಧಿಕಾರಿ/ಸಿಬ್ಬಂದಿ ಹುದ್ದೆಗಳೊಂದಿಗೆ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಆಡಳಿತ ಸುಧಾರಣೆ) ವಿಭಾಗದಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ( ಇ-ಆಡಳಿತ) ವಿಭಾಗಕ್ಕೆ ವರ್ಗಾಯಿಸಿ ಆದೇಶಿಸಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ 2019-20ನೇ ಸಾಲಿಗೆ ಮುಂದುವರೆದ ಸಕಾಲ ಯೋಜನೆಯ ಅನುಷ್ಠಾನಕ್ಕಾಗಿ ದಿನಾಂಕ: 01-04-2019ರಿಂದ ಒಟ್ಟು ರೂ 4.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲು ಮಂಜೂರಾತಿ ನೀಡಿ, ಈ ಸಂಬಂಧ ವೆಚ್ಚವನ್ನು ಲೆಕ್ಕಶೀರ್ಷಿಕೆ :2052-00-090-0-26-051ರಡಿ ಭರಿಸಲು ಸೂಚಿಸಲಾಗಿದೆ.

ಸಕಾಲ ಯೋಜನೆಯಡಿ ಪ್ರಸ್ತುತ 93 ಇಲಾಖೆ/ಸಂಸ್ಥೆಗಳ 1027 ಸೇವೆಗಳನ್ನು ನೀಡಲಾಗುತ್ತಿದ್ದು, ಯೋಜನೆಯ ಯಶಸ್ವಿ ಅನುಷ್ಠಾನವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಕಾಲ ಯೋಜನೆಯನ್ನು ಅತ್ಯಂತ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಿರತವಾಗಿ ಶ್ರಮಿಸಿ ರಾಜ್ಯ ಮಟ್ಟದಲ್ಲಿ ಪ್ರಥಮ ಶ್ರೇಯಾಂಕ ಪಡೆದ ಒಬ್ಬ ಹೆಸರಿಸಲಾದ ಅಧಿಕಾರಿಗೆ ಹಾಗೂ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಶ್ರೇಯಾಂಕ ಪಡೆದ ಒಬ್ಬ ಹೆಸರಿಸಲಾದ ಅಧಿಕಾರಿಗೆ ಪ್ರತಿ ತಿಂಗಳು ಅನುಕ್ರಮವಾಗಿ ₹ 50,000 ಮತ್ತು ₹10,000ಗಳ ನಗದು ಬಹುಮಾನ ಮತ್ತು ಪ್ರಶಂಸಾ ಪತ್ರ ನೀಡಲು ರಾಜ್ಯ ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 35 ಸಇವಿ 2019**
**ಬೆಂಗಳೂರು, ದಿನಾಂಕ:18-11-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರಡಿ ಸಕಾಲ ಯೋಜನೆಯ ಯಶಸ್ವಿ ಅನುಷ್ಠಾನವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಕಾಲ ಯೋಜನೆಯನ್ನು ಅತ್ಯಂತ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಿರತವಾಗಿ ಶ್ರಮಿಸಿ ರಾಜ್ಯ ಮಟ್ಟದಲ್ಲಿ ಪ್ರಥಮ ಶ್ರೇಯಾಂಕ ಪಡೆದ ಒಬ್ಬ ಹೆಸರಿಸಲಾದ

ಅಧಿಕಾರಿಗೆ ಹಾಗೂ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಶ್ರೇಯಾಂಕ ಪಡೆದ ಒಬ್ಬ ಹೆಸರಿಸಲಾದ ಅಧಿಕಾರಿಗೆ ಪ್ರತಿ ತಿಂಗಳು ಅನುಕ್ರಮವಾಗಿ ₹ 50,000 ಮತ್ತು ₹10,000 ಗಳ ನಗದು ಬಹುಮಾನ ಮತ್ತು ಪ್ರಶಂಸಾ ಪತ್ರ ನೀಡಲಾಗುವುದು.

ಈ ಸಂಬಂಧ ತಗಲುವ ವೆಚ್ಚವನ್ನು 2019-20ನೇ ಸಾಲಿನ ಸರ್ಕಾರದ ಲೆಕ್ಕ ಶೀರ್ಷಿಕೆ: 2052-00-090-0-26-051ರಡಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 235 ವೆಚ್ಚ-12 /2019 (ಇ-ಆಫೀಸ್), ದಿನಾಂಕ:25-10-2019ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ01 ಟಿಎಫ್ ಪಿ2019, ದಿನಾಂಕ:03-04-2019ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರಗಳ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವರಪ್ರಸಾದ್ ರೆಡ್ಡಿ.ಬಿ.ಎಸ್)
ಅಪರ ಮಿಷನ್ ನಿರ್ದೇಶಕರು-2
(ಸಕಾಲ ಮಿಷನ್)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

**ಇವರಿಗೆ :-**

1)ಪ್ರಧಾನ ಮಹಾಲೇಖಪಾಲರು(ಸಾಮಾನ್ಯ ಮತ್ತು ಸಾಮಾಜಿಕ ವಲಯದ ಲೆಕ್ಕಪರಿಶೋಧನೆ), (ಆರ್ಥಿಕ ಮತ್ತು ರಾಜ್ಯದಾಯ ವಲಯದ ಲೆಕ್ಕಪರಿಶೋಧನೆ), ಕರ್ನಾಟಕ, ಅಂಚೆ ಪೆಟ್ಟಿಗೆ ಸಂಖ್ಯೆ: 5398. "ಸಿ" ವಿಭಾಗ ,ಆಡಿಟ್ ಭವನ, ಬಹುಮಹಡಿಗಳ ಕಟ್ಟಡದ ಪಕ್ಕದಲ್ಲಿ,ಬೆಂಗಳೂರು-01

2) ಪ್ರಧಾನ ಮಹಾಲೇಖಪಾಲರು(ಲೆಕ್ಕಪತ್ರ&ಹಕ್ಕುಗಳು),ಕರ್ನಾಟಕ,ಅಂಚೆ ಪೆಟ್ಟಿಗೆ ಸಂಖ್ಯೆ:5369. ಪಾರ್ಕ್,ಹೌಸ, ರಸ್ತೆ,ಬೆಂಗಳೂರು-01

3) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ,ಸಕಾಲ ಮತ್ತು ಕಾರ್ಮಿಕ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ,

4) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,ವಿಧಾನಸೌಧ

5) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು (ಬಹುಮಹಡಿಗಳ ಕಟ್ಟಡ,ವಿಕಾಸಸೌಧ,ವಿಧಾನಸೌಧ).

6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,ಆರ್ಥಿಕ ಇಲಾಖೆ, ವಿಧಾನಸೌಧ

7) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ.ಆರ್ಥಿಕ ಇಲಾಖೆ(ಆಯವ್ಯಯ &ಸಂಪನ್ಮೂಲ).(ವೆಚ್ಚ). ವಿಧಾನಸೌಧ

8) ಎಲ್ಲಾ ಇಲಾಖಾ ಮುಖ್ಯಸ್ಥರು

9))ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

10) ಎಲ್ಲಾ ಜಿಲ್ಲಾಧಿಕಾರಿಗಳು

11)ಎಲ್ಲಾ ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು, ತಹಸೀಲ್ದಾರರು (ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ)

(ಆರ್ &ಐ ಶಾಖೆಯಮೂಲಕ)

12)ಲೆಕ್ಕಾಧೀಕ್ಷಕರು,ಸಕಾಲ ಮಿಷನ್-ಮಾಹಿತಿ ಹಾಗೂ ಕ್ರಮಕ್ಕಾಗಿ

13) ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು/ODGC

**ಮಾಹಿತಿಗಾಗಿ ಪ್ರತಿ:-**

1)ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,ಸಿಆಸುಇ(ಇ-ಆಡಳಿತ)ಹಾಗೂ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ರವರ ಆಪ್ತ ಸಹಾಯಕರು

2)ಅಪರ ಮಿಷನ್ ನಿರ್ದೇಶಕರು-1 ,ಸಕಾಲ ಮಿಷನ್ , ಸಿಆಸುಇ (ಇ-ಆಡಳಿತ) ಹಾಗೂ ನಿರ್ದೇಶಕರು ಇ.ಡಿ.ಸಿ.ಎಸ್.ನಿರ್ದೇಶನಾಲಯ,ಸಿ.ಆರ್. ಎನ್.ಚೇಂಬರ್ಸ್, 2 ನೇಮಹಡಿ, ಕಸ್ತೂರಬಾ ರಸ್ತೆ, ಬೆಂಗಳೂರು-01

3)ಅಪರ ಮಿಷನ್ ನಿರ್ದೇಶಕರು-2.ಸಕಾಲ ಮಿಷನ್ .ಸಿಆಸುಇ(ಇ-ಡಳಿತ).ಬಹುಮಹಡಿಗಳ ಕಟ್ಟಡ.2 ನೇ ಗೇಟ್ , ಕೊಠಡಿ ಸಂಖ್ಯೆ:502